

ಬೇರೆ ಯಾವುದಾದರೂ ಪ್ರಾಣಿಯೂ ಕಷ್ಟವೆಂದು ಅವನಲ್ಲಿ ಆಶ್ರಯವನ್ನು ಪಡೆದರೆ, ಆಗ ಅದನ್ನು ನನಗಿಂತಲೂ ಬಲಶಾಲಿಯಾದ ಶರಭನ್ನಾಗಿ ಬದಲಾಯಿಸಬಹುದು.ಯಾರಿಗೆ ಗೊತ್ತು. ಆ ಹೊಸ ಶರಭ ನನ್ನನ್ನು ಕೊಂದರೂ ಕೊಲ್ಲಬಹುದು.ಆದುದರಿಂದ ಈ ಋಷಿಯನ್ನು ಕೊಂದುಬಿಟ್ಟರೆ ಯಾವ ಭಯವೂ ಇರುವುದಿಲ್ಲ'.

ಇಂತಹ ಕೆಟ್ಟ ಆಲೋಚನೆಯಿಂದ ನಾಯಿಯ ರೂಪದಲ್ಲಿದ್ದ ಶರಭ ಋಷಿಯ ಬಳಿಗೆ ಬಂದಿತು. ಋಷಿಗೆ ನಾಯಿಯ ಕೆಟ್ಟ ಬುದ್ಧಿ ತಿಳಿಯಿತು.

ಆಗ ಋಷಿಯು 'ಎಲೈ ನಾಯಿ, ನೀನು ಹುಟ್ಟಿನಿಂದ ನಾಯಿಯಾಗಿಯೇ ಇದ್ದೆ. ನಿನ್ನ ಮೇಲೆ ಕರುಣೆಯಿಂದ ನಿನ್ನನ್ನು ಶರಭನ್ನಾಗಿ ಮಾಡಿದೆ. ಆದರೆ ಕೃತಜ್ಞತೆ ಇಲ್ಲದ ನೀನು ನನ್ನನ್ನೇ ಕೊಲ್ಲಲು ಯೋಚಿಸುತ್ತಿರುವೆ. ಆದುದರಿಂದ ಮತ್ತೆ ನೀನು ನಾಯಿಯಾಗಿ ಮಾರ್ಪಾಡು ಆಗು' ಎಂದನು.

ಋಷಿಯು ನಾಯಿಗೆ ಅಷ್ಟು ಹೇಳಿದ್ದೇ ತಡ ಶರಭವಾಗಿದ್ದ ಅದು ಪುನಃ ನಾಯಿಯಾಗಿ ಮಾರ್ಪಟ್ಟಿತು.

ಈ ಕಥೆಯನ್ನು ಮಹಾಭಾರತದ ಶಾಂತಿಪರ್ವದಲ್ಲಿ ಕಾಣಬರುತ್ತದೆ.

ನೀತಿ: ಸಹಾಯ ಮಾಡಿದವರಿಗೆ ಕೃತಜ್ಞನಾಗಿರಬೇಕು. ■

# ಸತ್ಯವಂತನಾದ ಧರ್ಮಬೋಧಕ

■ **ಲಕ್ಷ್ಮಿ ತಿಮ್ಮಪ್ಪ ಎನ್. ಶಿವಮೊಗ್ಗ**

ಒಂದು ಊರಿನಲ್ಲಿ ಒಬ್ಬ ಧರ್ಮಬೋಧಕನಿದ್ದ. ಅವನು ತೀರ ಬಡವ. ಆದರೆ ತುಂಬ ಪ್ರಾಮಾಣಿಕ. ಅವನಿಗೆ ಒಬ್ಬಳು ಹೆಂಡತಿ ಮತ್ತು ಏಳು ಜನ ಮಕ್ಕಳು. ಸುಮಾರು 40 ಪೌಂಡುಗಳು ವಾರ್ಷಿಕ ಆದಾಯ ಮಾತ್ರ ಅವನಿಗಿತ್ತು. ಬಹು ಕಷ್ಟದಲ್ಲೇ ಅವನ ಸಂಸಾರ ಸಾಗುತ್ತಿತ್ತು.

ಒಂದು ದಿನ ಧರ್ಮಬೋಧಕನು ಎಲ್ಲೋ ಹೋಗಿದ್ದ. ಮನೆಗೆ ಹಿಂದಿರುಗುವ ದಾರಿಯಲ್ಲಿ ಅವನಿಗೊಂದು ಚೀಲ ಗೋಚರಿಸಿತು. ಅವನು ಅದನ್ನು ಎತ್ತಿಕೊಂಡ. ಸಾಕಷ್ಟು ಭಾರವಾಗಿತ್ತು ಅದರ ಒಳಗೆ ನೋಡಿದಾಗ ಅಮೂಲ್ಯ ಚಿನ್ನಾಭರಣಗಳು ಅದರಲ್ಲಿದ್ದವು. ಸುತ್ತಮುತ್ತ ಯಾರೂ ಕಾಣಿಸಲಿಲ್ಲ. ಹಾಗಾಗಿ ಅವನು ಅದನ್ನು ಮನೆಗೆ ತಂದ. ಹೆಂಡತಿಗೂ ಅದನ್ನು ತೋರಿಸಿದ. ಅದು ತನಗೆ ದೊರೆತ ಬಗೆಯನ್ನೂ ವಿವರಿಸಿದ.

ಗಂಡನಿಗೆ ಚಿನ್ನಾಭರಣಗಳ ಚೀಲ ದೊರೆತುದರಿಂದ ಹೆಂಡತಿಗೆ ಭಾರೀ ಸಂತೋಷವಾಯಿತು. ತಮ್ಮ ಕಷ್ಟ ನಿವಾರಣೆಗಾಗಿ ದೇವನೇ ಅದನ್ನು ದೊರಕಿಸಿಕೊಟ್ಟ ಎಂದುಕೊಂಡಳು ಆಕೆ. ಗಂಡನಿಗೆ ಅದನ್ನು ತಮ್ಮ ಕುಟುಂಬದ ಉಪಯೋಗಕ್ಕೆ ಬಳಸಿಕೊಳ್ಳುವಂತೆ ಒತ್ತಾಯಿಸಿದಳು. ಆದರೆ ಗಂಡ ಅದಕ್ಕೆ ಒಪ್ಪಲಿಲ್ಲ. ಪರರ ಸೊತ್ತು ನಮಗೆ ಬೇಡ ಅದರೆ ಚಿಕ್ಕಾಸನ್ನೂ ನಾನು ಮುಟ್ಟುವುದಿಲ್ಲ ಅದನ್ನು ಕಳೆದು ಕೊಂಡವರನ್ನು ಹುಡುಕ ಬೇಕು. ಸತ್ಯಕ್ಕೆ ನಾನೆಂದಿಗೂ ದ್ರೋಹ ಬಗೆಯಲಾರೆ ಎಂದು ಹೇಳಿದ.

ಒಂದಿಷ್ಟು ದಿನಗಳು ಕಳೆದವು. ಒಂದು ದಿನ ಒಬ್ಬ ಗೃಹಸ್ಥನು ಧರ್ಮ ಬೋಧಕನ ಮನೆಗೆ ಬಂದ. ತಾನು ಕಳೆದು ಕೊಂಡ ಒಡವೆಗಳ ವಿವರಣೆ ನೀಡಿದ. ತಕ್ಷಣ ಧರ್ಮಬೋಧಕ ತನಗೆ ಸಿಕ್ಕಿದ ಚಿನ್ನಾಭರಣಗಳ ಚೀಲವನ್ನು ಅವನಿಗೆ ಒಪ್ಪಿಸಿದ. ತುಂಬ ಉಪಕಾರ ಮಾಡಿದಿರಿ ಎನ್ನುತ್ತ ಬಂದವನು ಹೊರಟು ಹೋದ.

ಧರ್ಮಬೋಧಕನ ಹೆಂಡತಿಗೆ ಭಾರೀ ಕೋಪ ಬಂತು. ಚಿನ್ನಾಭರಣಗಳನ್ನು ಮರಳಿ ಪಡೆದ ಆ ಧನಿಕ ಅದರ ಸ್ವಲ್ಪ ಭಾಗವನ್ನಾದರೂ ತಮಗೆ ಕೊಡಬೇಕಿತ್ತು ಎಂದು ಕೊಂಡಳು ಆಕೆ. ತನ್ನ ಗಂಡನ ಮಿತಿ ಮೀರಿದ ಸತ್ಯಸಂಧತೆಗಾಗಿ ಅವನನ್ನೂ ದೂರಿದಳು. ಆದರೆ ಗಂಡನು ಕೋಪಗೊಳ್ಳಲಿಲ್ಲ. ಸತ್ಯಸಂಧತೆಯೇ ಸರ್ವ ಶ್ರೇಷ್ಠ ನೀತಿ. ಅದಕ್ಕೆ ತಪ್ಪಿ ನಡೆಯುವುದು ತರವಲ್ಲ ಅದು ನನ್ನಿಂದಾಗದು. ಜನಕ್ಕೆ ನೀತಿ ಬೋಧಿಸುವವರೇ ಅನೀತಿಯ ಹಾದಿ ಹಿಡಿದರೆ ಬೇಲಿಯೇ ಹೊಲ ಮೇದಂತೆ ಆಗುವುದಿಲ್ಲವೆ ಎಂದು ಬಿಟ್ಟ.

ಇನ್ನೂ ಕೆಲವು ದಿನಗಳು ಸಂದವು. ಅಷ್ಟರಲ್ಲಿ ಆ ಧನಿಕನು ಧರ್ಮಬೋಧಕನು ತನ್ನ ಮನೆಗೊಮ್ಮೆ ಬರಲೇ ಬೇಕೆಂದು ಒತ್ತಾಯಿಸಿದ. ಧರ್ಮಬೋಧಕ ಒಪ್ಪಿಕೊಂಡ. ಹೇಳಿದಂತೆ ಆ ಶ್ರೀಮಂತನ ಮನೆಗೆ ಹೋದ. ಭರ್ಜರಿಯಾಗಿ ಊಟೋಪಚಾರಗಳು ನಡೆದವು. ಧರ್ಮಬೋಧಕ ತನ್ನ ಮನೆಗೆ ಹೊರಟು ನಿಂತ. ಆಗ ಆ ಶ್ರೀಮಂತನಿಂದ 50 ಪೌಂಡುಗಳ ಒಂದು ಚೆಕ್ ಮತ್ತು ವಾರ್ಷಿಕ 300 ಪೌಂಡು ಆದಾಯ ತರಬಲ್ಲ ಚಿನ್ನಾಭರಣಗಳ ಕಾಣಿಕೆ ಅವನಿಗೆ ದೊರೆಯಿತು. ಉದಾರಿಯಾದ ಆ ಧನಿಕನಿಗೆ ತುಂಬು ಹೃದಯದ ಕೃತಜ್ಞತೆ ಅರ್ಪಿಸಿ, ಧರ್ಮಬೋಧಕ ಹೊರಟು ಬಂದ. ಅಂದಿಗೆ ಅವನ ಬಡತನವೂ ನೀಗಿತು. ಕಷ್ಟ ಕಾರ್ಪಣ್ಯಗಳೂ ತೊಲಗಿ ಹೋದವು. ಧರ್ಮಬೋಧಕನ ಸತ್ಯಸಂಧತೆ ಅವನನ್ನು ಕಾಪಾಡಿತು. ■



ಶಿಲ್ಪಾ ಕಬ್ಬಿನಕಂತಿ